## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 240 |
| ಸದಸ್ಯರ ಹೆಸರು | ಶ್ರೀ ಪ್ರದೀಪ್ ಶೆಟ್ಟರ್ |
| ಉತ್ತರಿಸುವ ದಿನಾಂಕ | 28.01.2026 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಧಾರವಾಡ ನಗರ ಪ್ರದೇಶದಲ್ಲಿ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು;</td><td>ಧಾರವಾಡ ಜಿಲ್ಲೆಯ ಧಾರವಾಡ ನಗರ ಪ್ರದೇಶದಲ್ಲಿ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳ ಸಂಖ್ಯೆ:71</td></tr>
<tr><td>ಆ)</td><td>ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಡಿ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು ಹಾಗೂ ಸದರಿ ದೇವಸ್ಥಾನಗಳ ಅಭಿವೃದ್ಧಿ ಕಾರ್ಯಗಳಿಗೆ ಮಂಜೂರು ಮಾಡಲಾಗಿರುವ ಅನುದಾನವೆಷ್ಟು;</td><td>
<ul>
<li>ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಡಿ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳ ಸಂಖ್ಯೆ:68</li>
<li>ಹುಬ್ಬಳ್ಳಿ ಸೆಂಟ್ರಲ್ ವಿಧಾನ ಸಭಾ ಕ್ಷೇತ್ರದಲ್ಲಿನ ಮುಜರಾಯಿ/ ಮುಜರಾಯೇತರ ದೇವಾಲಯಗಳಿಗೆ ಆರಾಧನಾ / ಪರಿಶಿಷ್ಟ ಜಾತಿ ಉಪ ಯೋಜನೆ/ ಗಿರಿಜನ ಉಪ ಯೋಜನೆಗಳಡಿ ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ.3.74 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ</li>
</ul>
<table>
<tr><th>ಯೋಜನೆ</th><th>2025-26</th></tr>
<tr><td>ಆರಾಧನಾ ಯೋಜನೆ</td><td>1.67</td></tr>
<tr><td>ಪರಿಶಿಷ್ಟ ಜಾತಿ ಉಪ ಯೋಜನೆ</td><td>1.67</td></tr>
<tr><td>ಗಿರಿಜನ ಉಪ ಯೋಜನೆ</td><td>0.40</td></tr>
<tr><td>ಒಟ್ಟು</td><td>3.74</td></tr>
</table>
</td></tr>
<tr><td>ಇ)</td><td>ಹುಬ್ಬಳ್ಳಿಯ ಉಣಕಲ್‌ನಲ್ಲಿ ಬರುವ ಐತಿಹಾಸಿಕ ಚಂದ್ರಮೌಳೇಶ್ವರ ದೇವಸ್ಥಾನದ ಅಭಿವೃದ್ಧಿಗೆ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ಹಾಗೂ ಅಭಿವೃದ್ಧಿ ಕಾರ್ಯದ ಸದ್ಯದ ಪ್ರಗತಿಯ ಸ್ಥಿತಿ ಏನು?</td><td>ಹುಬ್ಬಳ್ಳಿಯ ಉಣಕಲ್‌ನಲ್ಲಿರುವ ಐತಿಹಾಸಿಕ ಶ್ರೀ ಚಂದ್ರಮೌಳೇಶ್ವರ ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖೆಯ ಆಡಳಿತಕ್ಕೆ ಒಳಪಟ್ಟ ಅಧಿಸೂಚಿತ ಸಂಸ್ಥೆ, ಮತ್ತು ಕೇಂದ್ರ ಪುರಾತತ್ವ ಇಲಾಖೆಯ ನಿರ್ವಹಣೆಗೆ ಒಳಪಡುವ ಸಂರಕ್ಷಿತ ಸಂಸ್ಥೆಯಾಗಿರುತ್ತದೆ. ಸದರಿ ದೇವಾಲಯವು ಪುರಾತನ ಪ್ರಸಿದ್ಧ ದೇವಾಲಯವಾಗಿದ್ದು, ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು ಅಗತ್ಯವಾಗಿರುತ್ತದೆ.</td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಶ್ರೀ ಚಂದ್ರಮೌಳೇಶ್ವರ ದೇವಸ್ಥಾನವು ನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದು, ಈ ದೇವಾಲಯಕ್ಕೆ ಅಗತ್ಯವಿರುವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸ್ಥಳಾವಕಾಶದ ಕೊರತೆಯಿರುತ್ತದೆ. ದೇವಾಲಯದ ಅಭಿವೃದ್ಧಿಗೆ ಅಗತ್ಯವಿರುವ ಜಾಗವನ್ನು ಭೂಸ್ವಾಧೀನ ಮೂಲಕ ಪಡೆದು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಈ ಸಂಬಂಧ ನಗರ ಪಾಲಿಕೆ ವತಿಯಿಂದ ರೂ.25.00 ಕೋಟಿಗಳ ಯೋಜನೆಯನ್ನು ಸಿದ್ಧಪಡಿಸಲಾಗಿದೆ.<br><br>ಈ ಸಂಬಂಧ ದಿನಾಂಕ:07.11.2025 ರಂದು ದೇವಾಲಯಕ್ಕೆ ಖುದ್ದಾಗಿ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿರುತ್ತೇನೆ.<br><br>ಈ ದೇವಾಲಯವು ಕೇಂದ್ರ ಪುರಾತತ್ವ ಇಲಾಖೆಗೆ ಒಳಪಡುವುದರಿಂದ, ಕೇಂದ್ರ ಪುರಾತತ್ವ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ದೇವಾಲಯದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಪರಿಶೀಲಿಸಲಾಗುತ್ತಿರುತ್ತದೆ. |

ಸಂಖ್ಯೆ: ಕಂಇ 8 ಮುಸಪ್ರ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

# ಕರ್ನಾಟಕ ವಿಧಾನ ಪರಿಷತ್

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 210 |
| ಉತ್ತರಿಸಬೇಕಾದ ದಿನಾಂಕ | 28.01.2026 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿ 7.02 ಫಲಾನುಭವಿಗಳಿಗೆ ವಸತಿ ಯೋಜನೆಯ ಪ್ರಸ್ತುತ ಸ್ಥಿತಿ ಏನು; ಈ ಯೋಜನೆಯ ಕೇವಲ ಶೇ.26 ರಷ್ಟು ಪ್ರಗತಿ ಸಾಧಿಸಿರುವುದು ನಿಜವೇ; ಇದಕ್ಕೆ ಕಾರಣಗಳೇನು; | 2024-25 ನೇ ಸಾಲಿಗೆ ಕೇಂದ್ರ ಸರ್ಕಾರವು 7,02,731 ಮನೆಗಳ ಗುರಿಯನ್ನು ನಿಗಧಿಪಡಿಸಿರುತ್ತದೆ. ಸದರಿ ಗುರಿಗೆ ಎದುರಾಗಿ 3,14,216 ಮನೆಗಳಿಗೆ ಫಲಾನುಭವಿಗಳ ಆಯ್ಕೆಯಾಗಿರುತ್ತದೆ. 3,88,515 ಬಾಕಿ ಗುರಿಗೆ ಫಲಾನುಭವಿಗಳಿಗೆ ಮಂಜೂರಾತಿ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಈ ಯೋಜನೆಯಡಿ 45% ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.<br><br>ಪ್ರಗತಿ ಸಾಧಿಸದೆ ಇರುವುದಕ್ಕೆ ಕಾರಣಗಳು ಈ ಕೆಳಕಂಡತಿವೆ:<br><br>1. ಮನೆಗಳ ಮಂಜೂರಾತಿಗೆ ಸಂಬಂಧಿಸಿದಂತೆ, ಮನೆಗಳನ್ನು ಮಂಜೂರು ಮಾಡುವಾಗ Permanent Waiting List (PWL) ನಿಂದ ಆದ್ಯತೆಯ ಸಂಖ್ಯೆಯ ಪ್ರಕಾರ ಕ್ರಮಾಂಕವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾಗಿರುತ್ತದೆ. ಆವಾಸ್ ಸಾಫ್ಟ್ ತಂತ್ರಾಂಶದನ್ವಯ ಸಧ್ಯ ರಾಜ್ಯದಲ್ಲಿ 9,10,593 ವಸತಿ & ನಿವೇಶನರಿತರಿದ್ದಾರೆ. ಅವಾಸಾಫ್ಟ್‌ನಲ್ಲಿ, ಆದ್ಯತೆಯ ಪಟ್ಟಿಯಲ್ಲಿ ನಿವೇಶನರಹಿತರಿಗೆ ಮೊದಲನೇ ಆದ್ಯತೆಯನ್ನು ನೀಡಿದ್ದು, ಆದ್ಯತೆಪಟ್ಟಿ ನಿವೇಶನರಹಿತರಿಂದ ಪ್ರಾರಂಭವಾಗುತ್ತದೆ. ಅವಾಸಾಫ್ಟ್ ದತ್ತಾಂಶದ ಪ್ರಕಾರ ಸುಮಾರು 1.50 ಲಕ್ಷ ನಿವೇಶನರಹಿತರು ಆದ್ಯತೆಪಟ್ಟಿಯಲ್ಲಿದ್ದಾರೆ. ಆದ್ಯತೆಯ ಸಂಖ್ಯೆಯ ಕ್ರಮಾಂಕವಾಗಿ ಆಯ್ಕೆ ಮಾಡಬೇಕಾದಾಗ ನಿವೇಶನರಹಿತರಿಗೆ ಮನೆ ನಿರ್ಮಿಸಲು ನಿವೇಶನವಿಲ್ಲದಿದ್ದರೂ ಸಹ ಕಡ್ಡಾಯವಾಗಿ ಮಂಜೂರಾತಿ ನೀಡಬೇಕಾಗುತ್ತದೆ. ನಿವೇಶನರಹಿತರಿಗೆ ಮನೆ ಮಂಜೂರು ಮಾಡಿದ್ದಲ್ಲಿ ನಿವೇಶನಲಭ್ಯವಿಲ್ಲದೇ ಅವು unstarted ಮನೆಗಳಾಗಿ ಉಳಿಯುತ್ತವೆ. ಮುಂದುವರೆದು, ಪರಿಶೀಲನಾ ಸಭೆಗಳಲ್ಲಿ ಕ್ಷೇತ್ರ ಅನುಷ್ಠಾನಾಧಿಕಾರಿಗಳಿಂದ ತಿಳಿದುಬಂದಿರುವ ಪ್ರಕಾರ ಆದ್ಯತೆಯಲ್ಲಿರುವ ಕೆಲವು ವ್ಯಕ್ತಿಗಳು ಪ್ರಸಕ್ತ ವರ್ಷದಲ್ಲಿ ಆರ್ಥಿಕ / ತಮ್ಮದೇ ಆದ ವೈಯಕ್ತಿಕ ಕಾರಣಗಳಿಂದ ಅಥವಾ ನಿವೇಶನದ ಕಾನೂನು ಸಮಸ್ಯೆಯಿಂದಾಗಿ ಮನೆ ನಿರ್ಮಿಸಲು ಇಚ್ಛಿಸುತ್ತಿಲ್ಲ. ಕೇಂದ್ರ ಸರ್ಕಾರದ ತಂತ್ರಾಂಶದನ್ವಯ ಕ್ರಮಾಂಕದಲ್ಲಿರುವರಿಗೆ ಒಂದು ಮಂಜೂರಾತಿಯನ್ನು ನೀಡಬೇಕು ಅಥವಾ ಅವರನ್ನು ಪಟ್ಟಿಯಿಂದ ರದ್ದುಗೊಳಿಸಬೇಕು. ತದನಂತರವೇ next in que ನಲ್ಲಿರುವವರಿಗೆ ಮನೆ ಮಂಜೂರಾತಿಯನ್ನು ನೀಡಬಹುದಾಗಿರುತ್ತದೆ.<br><br>ಕೇಂದ್ರ ಸರ್ಕಾರದ ನಿರ್ದೇಶನಗಳ ಪ್ರಕಾರ, ಪ್ರಸ್ತುತ ಮನೆ ನಿರ್ಮಿಸಲು ಆಸಕ್ತಿ ಇಲ್ಲದ ಮತ್ತು ನಿವೇಶನರಹಿತ ಅರ್ಜಿದಾರರನ್ನು ರದ್ದುಗೊಳಿಸಿ (Remand) PWL ನಲ್ಲಿ ಮುಂದಿನ ವ್ಯಕ್ತಿಗೆ ಮಂಜೂರಾತಿ ಮಾಡಲು ಜಿಲ್ಲೆಗಳಿಗೆ ನಿರ್ದೇಶಿಸಲಾಗಿದೆ. ಪ್ರಸ್ತುತ ಮನೆ ನಿರ್ಮಿಸಲು ಆಸಕ್ತಿ ಇಲ್ಲದ ಮತ್ತು ನಿವೇಶನರಹಿತ ವ್ಯಕ್ತಿಗಳು ರದ್ದುಗೊಳಿಸಲು ಸದರಿ ವ್ಯಕ್ತಿಯ ಲಿಖಿತ consent ಅವಶ್ಯಕವಿರುತ್ತದೆ. ಆದರೆ ಅಂತಹ ಅರ್ಜಿದಾರರು ರದ್ದುಗೊಳಿಸಲು (ರಿಮಾಂಡ್‌ಗೆ) ಒಪ್ಪಿಗೆ ನೀಡುತ್ತಿಲ್ಲ ಎಂದು ಪರಿಶೀಲನಾ ಸಭೆಗಳಲ್ಲಿ ಅನುಷ್ಠಾನಾಧಿಕಾರಿ ಗಳು ತಿಳಿಸಿರುತ್ತಾರೆ. ಇದರಿಂದ ಗ್ರಾಮ ಪಂಚಾಯಿತಿ ಅಧಿಕಾರಿಗಳು ರದ್ದುಗೊಳಿಸಲು ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ ಮತ್ತು ಮುಂದಿನ (next in que) ವಸತಿರಹಿತರಿಗೆ ಮಂಜೂರಾತಿಯನ್ನು ನೀಡಲಾಗುತ್ತಿರುವುದಿಲ್ಲ.<br><br>2. ಫಲಾನುಭವಿಗಳನ್ನು 2018 ರ ಪಟ್ಟಿಯಿಂದ ಆಯ್ಕೆ ಮಾಡಬೇಕಾಗಿದ್ದು, ಹೊಸ ವಸತಿರಹಿತರನ್ನು ಸೇರ್ಪಡಿಸಲು ಅವಕಾಶವಿರುವುದಿಲ್ಲ.<br>3. ರಾಜ್ಯ ಸರ್ಕಾರದ ಯೋಜನೆಯಡಿ ಪ.ಜಾತಿ /ಪಂಗಡದ ಫಲಾನುಭವಿಗಳಿಗೆ ರೂ. 2.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದ್ದು, ಕೇಂದ್ರ ಸರ್ಕಾರದ ಯೋಜನೆಯಡಿ ರೂ. 1.75 ಲಕ್ಷ ಸಹಾಯಧನವನ್ನು ನೀಡಲಾಗುತ್ತಿದೆ. ಹಾಗೂ ಈ ಹಿಂದೆ ನೆರೆ ಸಂತ್ರಸ್ತ ವಸತಿ ಯೋಜನೆಯಡಿ ಪ್ರತಿ ಮನೆಗೆ ರೂ. 3.00 ಲಕ್ಷದಿಂದ ರೂ. 5.00 ಲಕ್ಷದವರೆಗೆ ಸಹಾಯಧನವನ್ನು ಒದಗಿಸಿದ್ದು, ಫಲಾನುಭವಿಗಳು / ವಸತಿರಹಿತರು ಅನುದಾನ ಹೆಚ್ಚಳಕ್ಕೆ ಆಸಕ್ತಿಯನ್ನು ತೋರುತ್ತಿದ್ದಾರೆ. |

| | | |
|---|---|---|
| ಆ) | ಬಸವ ವಸತಿ ಯೋಜನೆ ಮತ್ತು ಡಾ|| ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ ಸೇರಿದಂತೆ ವಿವಿಧ ರಾಜ್ಯ ಮತ್ತು ಕೇಂದ್ರ ಯೋಜನೆಗಳ ಅಡಿಯಲ್ಲಿ ವಸತಿ ನಿರ್ಮಾಣದಲ್ಲಿ ಗಮನಾರ್ಹ ವಿಳಂಬಕ್ಕೆ ಪ್ರಾಥಮಿಕ ಕಾರಣಗಳೇನು; | ಬಸವ ವಸತಿ ಯೋಜನೆ ಮತ್ತು ಡಾ|| ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ ಸೇರಿದಂತೆ ವಿವಿಧ ರಾಜ್ಯ ಮತ್ತು ಕೇಂದ್ರ ಯೋಜನೆಗಳ ಅಡಿಯಲ್ಲಿ ವಸತಿ ನಿರ್ಮಾಣದಲ್ಲಿ ಗಮನಾರ್ಹ ವಿಳಂಬಕ್ಕೆ ಪ್ರಾಥಮಿಕ ಕಾರಣಗಳ ವಿವರ ಇಂತಿದೆ.<br>• ಕಟ್ಟಡ ನಿರ್ಮಾಣದ ವೆಚ್ಚವು ದಿನೇ ದಿನೇ ಏರಿಕೆಯಾಗುತ್ತಿದ್ದು, ಪ್ರಸ್ತುತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಒದಗಿಸಲಾಗುತ್ತಿರುವ ಸಹಾಯಧನವು ಮನೆ ನಿರ್ಮಿಸಲು ಸಾಕಾಗುತ್ತಿಲ್ಲ. ಬಾಕಿ ಮೊತ್ತವನ್ನು ಬಡ ಫಲಾನುಭವಿಗಳು ಸ್ವತಃ ಸಕಾಲದಲ್ಲಿ ಭರಿಸಲು ಕಷ್ಟಕರವಾಗಿದ್ದು, ಮನೆಗಳನ್ನು ಪೂರ್ಣಗೊಳಿಸಲು ವಿಳಂಬವಾಗುತ್ತಿದೆ.<br>• ಗ್ರಾಮೀಣ ಪ್ರದೇಶಗಳಲ್ಲಿ ಮನೆ ನಿರ್ಮಿಸಿಕೊಳ್ಳಲು ಅತ್ಯವಶ್ಯಕ ಪದಾರ್ಥಗಳಾದ ಮರಳು, ನೀರು, ಕಾರ್ಮಿಕರು ನಿಗದಿತ ಅವಧಿಯೊಳಗೆ ಸಿಗುವುದು ಕಷ್ಟಕರವಾಗಿರುತ್ತದೆ.<br>• ನಿವೇಶನದ ತಕಾರಾರು /ಜಂಟಿ ಖಾತೆ ಹೊಂದಿರುವುದು .<br>• ಕೆಲವು ಫಲಾನುಭವಿಗಳು ಜೀವನೋಪಾಯಕ್ಕಾಗಿ ಇತರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದು, ನಿಗದಿತ ಅವಧಿಯೊಳಗೆ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. |
| ಇ) | ನೈಜ ನಿರಾಶ್ರಿತ ಕುಟುಂಬಗಳಿಗೆ ವಸತಿ ಸಿಗಲು ಅಥವಾ ಫಲಾನುಭವಿಗಳ ಆಯ್ಕೆಯು ಗ್ರಾಮ/ಸಭೆ ವಾರ್ಡ್ ಮಟ್ಟದಲ್ಲಿ ಪಾರದರ್ಶಕವಾಗಿ ರಾಜಕೀಯ ಅಥವಾ ಇನ್ನಿತರೇ ಹಸ್ತಕ್ಷೇಪದಿಂದ ಹೊರತಾಗಿ ಮುಕ್ತವಾಗಿ ನಡೆಯುವಂತೆ ನೋಡಿಕೊಳ್ಳಲು ಇಲಾಖೆ ವತಿಯಿಂದ ಯಾವ ಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ? | ನೈಜ ನಿರಾಶ್ರಿತ ಕುಟುಂಬಗಳಿಗೆ ವಸತಿ ಸಿಗಲು ಅಥವಾ ಫಲಾನುಭವಿಗಳ ಆಯ್ಕೆಯು ಗ್ರಾಮ/ಸಭೆ ವಾರ್ಡ್ ಮಟ್ಟದಲ್ಲಿ ಪಾರದರ್ಶಕವಾಗಿ ಯಾವುದೇ ಹಸ್ತಕ್ಷೇಪವಿಲ್ಲದೇ ಮುಕ್ತವಾಗಿ ನಡೆಯುವ ಸಲುವಾಗಿ ವಸತಿ ಇಲಾಖೆ ವತಿಯಿಂದ **"ಮನೆ"** ಮಾರ್ಗಸೂಚಿಯನ್ನು ಚಾಲ್ತಿಗೆ ತರಲಾಗಿದ್ದು, ಅದರನ್ವಯ ಅಧ್ಯಾಯ-1ರ ಕಂಡಿಕೆ.1.4ರಲ್ಲಿ ಫಲಾನುಭವಿಗಳ ಆಯ್ಕೆಯ ಬಗ್ಗೆ ಸವಿಸ್ತಾರವಾಗಿ ವಿವರಿಸಲಾಗಿದ್ದು, ಅದರಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಕ್ರಮವಹಿಸಲಾಗುತ್ತಿದೆ. (ಲಗತ್ತಿಸಿದೆ). |

ಸಂಖ್ಯೆ: ವಇ 32 ಹೆಚ್ಎಂ 2026

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

1.4.13 ಗ್ರಾಮಸಭೆಯಲ್ಲಿ ಅಂತಿಮವಾಗಿ ಆಯ್ಕೆಗೊಂಡ ಫಲಾನುಭವಿಗಳು ಖುದ್ದಾಗಿ ಗ್ರಾಮ ಪಂಚಾಯತಿಗೆ ಹಾಜರಾಗಿ ಬೆರಳಚ್ಚು ಗುರುತು ಹಾಗೂ ತಮ್ಮ ಮೊಬೈಲ್ ಗೆ ರವಾನೆ ಆಗುವ ಗುಪ್ತ ಸಂಖ್ಯೆ (One Time Password) ಯನ್ನು ನೀಡುವ ಮೂಲಕ UIDAI ವೆಬ್ ಸರ್ವರ್‌ನಿಂದ ಫಲಾನುಭವಿಗಳ ಹೆಸರು, ವಿಳಾಸ, ಇನ್ನಿತರ ಮಾಹಿತಿಯನ್ನು ಪಡೆದುಕೊಳ್ಳುವುದು. ಹಾಗೂ ಫಲಾನುಭವಿಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿ ಸಂಖ್ಯೆಗಳನ್ನು ನಮೂದಿಸುವ ಮೂಲಕ ಸಂಬಂಧಪಟ್ಟ ಇಲಾಖೆಗಳ ಸರ್ವರ್‌ನ ಡಾಟಾಬೇಸ್‌ನಿಂದ ಈ ಮಾಹಿತಿಯನ್ನು ದೃಢೀಕರಿಸಿಕೊಳ್ಳುವುದು. ನಂತರ ಫಲಾನುಭವಿಗಳ ವಿವರಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಎಲ್ಲಾ ಫಲಾನುಭವಿಗಳು ಮನೆ ನಿರ್ಮಿಸಲು ಉದ್ದೇಶಿಸಿರುವ ಖಾಲಿ ನಿವೇಶನಗಳನ್ನು ಭೌತಿಕ ತಪಾಸಣೆ ನಡೆಸಿ ಖಾಲಿ ನಿವೇಶನದ ಛಾಯಾಚಿತ್ರ ಮತ್ತು ಆಯ್ಕೆಯಾದ ಫಲಾನುಭವಿಯ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಜಿ.ಪಿ.ಎಸ್. ಮೊಬೈಲ್ ಮೂಲಕ ತೆಗೆದು ಆನ್‌ಲೈನ್‌ಗೆ ಅಳವಡಿಸಿ ಕಾರ್ಯನಿರ್ವಹಣಾಧಿಕಾರಿಗಳ ಅನುಮತಿಗೆ ಸಲ್ಲಿಸುವುದು. (ಒಂದು ವೇಳೆ ಖಾಲಿ ನಿವೇಶನವಿಲ್ಲದೇ ಗುಡಿಸಲು/ಶಿಥಿಲಗೊಂಡ ಮನೆ/ತಳಪಾಯ ನಿರ್ಮಿಸಿಕೊಂಡಿದ್ದಲ್ಲಿ ಪರಿಗಣಿಸುವುದು)

## 1.5 ಅನುಮೋದನೆ ಪ್ರಕ್ರಿಯೆ

1.5.1 ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಗ್ರಾಮಸಭೆಯಲ್ಲಿ ಆಯ್ಕೆಗೊಂಡ ಫಲಾನುಭವಿಗಳ ವಿವರಗಳಿಗೆ ಸಂಬಂಧಿಸಿದಂತೆ ಆಧಾರ್ ವೆಬ್ ಸರ್ವರ್‌ನಿಂದ ಫಲಾನುಭವಿಗಳ ಹೆಸರು, ವಿಳಾಸ, ಇನ್ನಿತರ ಮಾಹಿತಿಯನ್ನು ಹಾಗೂ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿ ಸಂಖ್ಯೆಗಳನ್ನು ನಮೂದಿಸುವ ಮೂಲಕ ಸಂಬಂಧಪಟ್ಟ ಇಲಾಖೆಗಳ ಸರ್ವರ್‌ನ ಡಾಟಾಬೇಸ್‌ನಿಂದ ಮಾಹಿತಿಯನ್ನು ದೃಢೀಕರಿಸಿಕೊಂಡು ಫಲಾನುಭವಿಗಳ ಪಟ್ಟಿಯನ್ನು ಹಾಗೂ ಗ್ರಾಮಸಭಾ ಠರಾವು ಮತ್ತು ವಿಡಿಯೋ ಚಿತ್ರೀಕರಣವನ್ನು ನಿಗಮದ ವೆಬ್‌ಸೈಟ್‌ನಲ್ಲಿ 3 ದಿನಗಳೊಳಗಾಗಿ ಅಳವಡಿಸಿ ಕಾರ್ಯನಿರ್ವಹಣಾಧಿಕಾರಿಗಳ ಪರಿಶೀಲನೆಗೆ ಸಲ್ಲಿಸುವುದು.

1.5.2 ಕಾರ್ಯನಿರ್ವಹಣಾಧಿಕಾರಿಗಳು ಅಧ್ಯಕ್ಷರ ಅಪ್ಪಣೆ ಮೇರೆಗೆ ಜಾಗೃತಿ ಸಮಿತಿಯ ಸಭೆಯನ್ನು ಕರೆಯುವುದು. ಕಡ್ಡಾಯವಾಗಿ ಸಭೆಯ ಸೂಚನಾಪತ್ರವನ್ನು ಜಾಗೃತಿ ಸಮಿತಿಯ ಎಲ್ಲಾ ಸದಸ್ಯರಿಗೆ ಜಾರಿಗೊಳಿಸುವುದು.

1.5.3 ಕಾರ್ಯನಿರ್ವಹಣಾಧಿಕಾರಿಗಳು ಗ್ರಾಮಪಂಚಾಯತಿಗಳಿಂದ ಈ ಮೇಲೆ ತಿಳಿಸಿದಂತೆ ಗ್ರಾಮಸಭೆಗಳಲ್ಲಿ ಆಯ್ಕೆಗೊಂಡ ಅರ್ಹ ಫಲಾನುಭವಿಗಳ ಪಟ್ಟಿ, ಠರಾವು ಹಾಗೂ ವಿಡಿಯೋ ಚಿತ್ರೀಕರಣವನ್ನು ವೀಕ್ಷಿಸಿ ದೃಢಪಡಿಸಿಕೊಳ್ಳುವುದರ ಜೊತೆಗೆ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಿ ಜಾಗೃತಿ ಸಮಿತಿಗೆ ಮಂಡಿಸುವುದು.

I ಆಯ್ಕೆಯಾಗಿರುವ ಫಲಾನುಭವಿಗಳು ಸ್ವಂತ ನಿವೇಶನ ಹೊಂದಿರುವ ಬಗ್ಗೆ ಗ್ರಾಮಪಂಚಾಯತಿ ಆಸ್ತಿ ರಿಜಿಸ್ಟರ್ (ನಮೂನೆ-9) ಪರಿಶೀಲಿಸಿಕೊಳ್ಳುವುದು.

II ಫಲಾನುಭವಿಯು ವಿವಾಹಿತ ಮಹಿಳೆ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿಯಾಗಿರಬೇಕು. ಯಾವುದೇ ಕಾರಣಕ್ಕೂ ಪುರುಷ ಫಲಾನುಭವಿಗಳನ್ನು ಪರಿಗಣಿಸುವಂತಿಲ್ಲ. ಒಂದು ವೇಳೆ ಪುರುಷರು ಮಾಜಿ ಯೋಧರು/ವಿಧುರರು/ ಅಂಗವಿಕಲರು/ಹಿರಿಯ ನಾಗರಿಕರಾಗಿದ್ದಲ್ಲಿ ಸ್ಪಷ್ಟವಾಗಿ ನಮೂದಿಸಿ ಫಲಾನುಭವಿಗಳನ್ನಾಗಿ ಆಯ್ಕೆ ಮಾಡಬಹುದಾಗಿರುತ್ತದೆ. ಒಂದು ವೇಳೆ ಅರ್ಹ ವಸತಿ ರಹಿತ ಕುಟುಂಬದೊಳಗೆ ನಿವೇಶನವು ಗಂಡನ ಹೆಸರಿನಲ್ಲಿದ್ದಲ್ಲಿ ಅಂತಹ ಕುಟುಂಬದ ಮಹಿಳೆಯರನ್ನು ಫಲಾನುಭವಿಗಳಾಗಿ ಪರಿಗಣಿಸಿ ನಿವೇಶನದ ಖಾತೆಯನ್ನು ಮಹಿಳೆಯ ಹೆಸರಿಗೆ ವರ್ಗಾಯಿಸಿ, ದಾಖಲೀಕರಣವನ್ನು ನಿರ್ವಹಿಸಿ, ಅನುದಾನವನ್ನು ಮಹಿಳೆಗೆ ಮಾತ್ರ ನೀಡುವುದು. (ಸರ್ಕಾರಿ ಆದೇಶ ಸಂಖ್ಯೆ ವ ಇ 23 ಹೆಚ್‌ಎವೈ 09, ದಿನಾಂಕ 16.12.09)

III ರದ್ದುಪಡಿಸಿದೆ.

1.5.4 ಜಾಗೃತಿ ಸಮಿತಿಯು ಆಯಾಯ ಗ್ರಾಮಪಂಚಾಯಿತಿಗಳು ಗ್ರಾಮಸಭೆ ಮೂಲಕ ಆಯ್ಕೆಗೊಳಿಸಿರುವ ಅರ್ಹ ಫಲಾನುಭವಿಗಳ ಪಟ್ಟಿ ಹಾಗೂ ವಿಡಿಯೋ ದೃಶ್ಯಾವಳಿಗಳನ್ನು ಕೂಲಂಕುಷವಾಗಿ ಪರಿಶೀಲಿಸುವುದು. ಗ್ರಾಮಪಂಚಾಯಿತಿಯು ಸಲ್ಲಿಸಲಾದ ಫಲಾನುಭವಿಗಳು ಅರ್ಹರಿದ್ದಲ್ಲಿ ಸದರಿ ಪಟ್ಟಿಗೆ ಅನುಮೋದನೆ ನೀಡುವುದು.

1.5.5 ಒಂದು ವೇಳೆ ಅನರ್ಹರು ಪಟ್ಟಿಯಲ್ಲಿ ಸೇರಿರುವುದು ರುಜುವಾತಾದಲ್ಲಿ ಅಂತಹ ಅನರ್ಹರನ್ನು ಕೈಬಿಟ್ಟು ಅರ್ಹ ಫಲಾನುಭವಿಗಳ ಪಟ್ಟಿಯನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸಲು ಸದಸ್ಯ ಕಾರ್ಯದರ್ಶಿಯಾದ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿ, ರದ್ದುಪಡಿಸಲಾದ ಅನರ್ಹ ಫಲಾನುಭವಿಗಳ ಬದಲಿಗೆ ಅರ್ಹ ಫಲಾನುಭವಿಗಳನ್ನು ಪುನ: ಗ್ರಾಮಸಭೆ ಮೂಲಕ ಆಯ್ಕೆಗೊಳಿಸಲು ಗ್ರಾಮ ಪಂಚಾಯ್ತಿಗೆ ಸೂಚಿಸುವುದು. (ಜಾಗೃತಿ ಸಮಿತಿಗೆ ಅನರ್ಹ ಫಲಾನುಭವಿಗಳನ್ನು ರದ್ದುಪಡಿಸಲು ಅವಕಾಶವಿದಿಯೇ ಹೊರತು ಬದಲಿ ಫಲಾನುಭವಿಗಳನ್ನು ಅಥವಾ ಹೊಸದಾಗಿ ಫಲಾನುಭವಿಗಳನ್ನು ಸೇರಿಸಲು ಅಧಿಕಾರವಿರುವುದಿಲ್ಲ)'

1.5.6 ಕಾರ್ಯನಿರ್ವಹಣಾಧಿಕಾರಿಗಳು ಜಾಗೃತಿ ಸಮಿತಿಯಲ್ಲಿ ನಡೆದ ಚರ್ಚೆಗಳನ್ನು ಉಚಿತವಾಗಿ ಠರಾವು ಮೂಲಕ ಜಾಗೃತಿ ಸಮಿತಿಯ ಪುಸ್ತಕದಲ್ಲಿ ನಮೂದಿಸಿ, ಅನುಮೋದಿಸಲಾದ ಗ್ರಾಮವಾರು ಹಾಗೂ ಗ್ರಾಮಪಂಚಾಯಿತಿವಾರು ಫಲಾನುಭವಿಗಳ ಸಂಖ್ಯೆಗಳನ್ನು ನಮೂದಿಸಿ, ಜಾಗೃತಿ ಸಮಿತಿಯಲ್ಲಿ ಹಾಜರಿರುವ ಎಲ್ಲಾ ಅಧಿಕಾರಿ ಹಾಗೂ ಅಧಿಕಾರೇತರರ ಸಹಿಯನ್ನು ತಪ್ಪದೇ ಪಡೆದುಕೊಳ್ಳುವುದು.

1.5.7 ಜಾಗೃತಿ ಸಮಿತಿಯು ಗ್ರಾಮಸಭೆಯಲ್ಲಿ ಫಲಾನುಭವಿಗಳು ಆಯ್ಕೆಯಾದ ಒಂದು ತಿಂಗಳೊಳಗೆ ಸಭೆ ಸೇರಿ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡುವುದು ಕಡ್ಡಾಯವಾಗಿದೆ. ಒಂದು ವೇಳೆ ಜಾಗೃತಿ ಸಮಿತಿಯು ನಿಗದಿಪಡಿಸಿದ ದಿನಾಂಕದೊಳಗೆ ಸಭೆ ಸೇರಿ

1.3.4 ನಿಗಮವು ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳ ವರದಿಯನ್ನು ಪರಿಗಣಿಸಿ ಗುರಿ ಹಂಚಿಕೆಯಾದ ದಿನಾಂಕದ ನಂತರ 145 ದಿನಗಳೊಳಗೆ ಅಧ್ಯರ್ಪಣೆಯಾಗುವ ಗುರಿಯಲ್ಲಿ ಶೇ.75ರಷ್ಟು ಗುರಿಯನ್ನು ಶೇ.70ಕ್ಕೂ ಹೆಚ್ಚು ಕಾಮಗಾರಿ ಆದೇಶ ವಿತರಿಸಿದ ಇತರ ಜಿಲ್ಲೆಗಳಿಗೆ ಬಾಕಿ ಲಭ್ಯವಿರುವ ವಸತಿ ರಹಿತರ ಸಂಖ್ಯೆಯನ್ನಾಧಾರಿಸಿ ನೀಡಲು ಹಾಗೂ ಸದರಿ ಜಿಲ್ಲೆಯೊಳಗೆ ಶೇ.85ರಷ್ಟು ಕಾಮಗಾರಿ ಆದೇಶ ವಿತರಿಸಿದ ಗ್ರಾಮ ಪಂಚಾಯತಿಗಳಿಗೆ ಬಾಕಿ ಇರುವ ವಸತಿ ರಹಿತರ ಸಂಖ್ಯೆಗನುಗುಣವಾಗಿ ಈ ಗುರಿಯನ್ನು ನೀಡುವುದು ಉಳಿದಂತೆ ಸರ್ಕಾರವು ಅಧ್ಯರ್ಪಣೆಯಾಗುವ ಗುರಿಯಲ್ಲಿ ಶೇ.25ರಷ್ಟು ಗುರಿಯನ್ನು ಅವಶ್ಯಕತೆ/ಬೇಡಿಕೆಗನುಗುಣವಾಗಿ ಮರು ಹಂಚಿಕೆ ಮಾಡುವುದು..

## 1.4 ಫಲಾನುಭವಿಗಳ ಆಯ್ಕೆ

1.4.1 ಸರ್ಕಾರ ಗುರಿ ನಿಗದಿಪಡಿಸಿದ ನಂತರ ಗ್ರಾಮಪಂಚಾಯಿತಿಗಳು ಸದರಿ ಗುರಿಗೆ ಎದುರಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಗ್ರಾಮಸಭೆಯ ದಿನಾಂಕ, ವೇಳೆ, ಮತ್ತು ಸ್ಥಳವನ್ನು ನಿಗದಿಪಡಿಸಿ ಜ್ಞಾಪನಾ ಪತ್ರವನ್ನು ಹೊರಡಿಸಿದ ದಿನದಂದೇ ಸದರಿ ವಿವರವನ್ನು ಆನ್‌ಲೈನ್‌ಗೆ ಅಳವಡಿಸಿ, ಜೆರಾಕ್ಸ್ ಪ್ರತಿಯನ್ನು ಸ್ಕ್ಯಾನ್ ಮೂಲಕ ಅಳವಡಿಸತಕ್ಕದ್ದು.

1.4.2 ಗ್ರಾಮಪಂಚಾಯಿತಿಗಳು ಸರ್ಕಾರ ಗುರಿ ನಿಗದಿಪಡಿಸಿದ ನಂತರ 30 ದಿನಗಳ ಒಳಗೆ ಗ್ರಾಮಸಭೆಯನ್ನು ಕಡ್ಡಾಯವಾಗಿ ನಡೆಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು. ಒಂದು ವೇಳೆ ಗ್ರಾಮಪಂಚಾಯಿತಿಯು ನಿಗದಿತ ಅವಧಿಯೊಳಗೆ ಗ್ರಾಮಸಭೆಯ ಮುಖಾಂತರ ಫಲಾನುಭವಿಗಳನ್ನು ಆಯ್ಕೆ ಮಾಡಲು ವಿಫಲವಾದಲ್ಲಿ ಸಂಬಂಧಪಟ್ಟ ಕಾರ್ಯನಿರ್ವಹಣಾಧಿಕಾರಿಗಳು 15 ದಿನಗಳೊಳಗೆ ನಿಯಮಾನುಸಾರ ಗ್ರಾಮಸಭೆ ಕರೆದು ಅರ್ಹ ಫಲಾನುಭವಿಗಳನ್ನು ಆಯ್ಕೆಗೊಳಿಸುವುದು. ಒಂದು ವೇಳೆ ಗ್ರಾಮಸಭೆ ಮೂಲಕ ಫಲಾನುಭವಿಗಳನ್ನು ಆಯ್ಕೆಗೊಳಿಸಲು ಕಾರ್ಯನಿರ್ವಹಣಾಧಿಕಾರಿಗಳು ವಿಫಲರಾದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಶಿಸ್ತಿನ ಕ್ರಮ ಕೈಗೊಳ್ಳುವುದು.

1.4.3 ಗ್ರಾಮಪಂಚಾಯಿತಿಗಳು ಅರ್ಹ ವಸತಿರಹಿತರನ್ನು ಆಯ್ಕೆ ಮಾಡುವಾಗ ಕ್ರಮ ಸಂಖ್ಯೆ 1.2 ರಂತೆ ತಯಾರಿಸಲಾದ ಫಲಾನುಭವಿಗಳ ಪಟ್ಟಿಯನ್ನು ಮಾತ್ರ ಪರಿಗಣಿಸಿ ಈ ಕೆಳಕಂಡಂತೆ ಆಯ್ಕೆ ಮಾಡುವುದು

1.4.4 ಗ್ರಾಮಪಂಚಾಯಿತಿಗಳು ಫಲಾನುಭವಿಗಳ ಆಯ್ಕೆಗಾಗಿ ಒಂದು ವಾರ ಮುಂಚಿತವಾಗಿ ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ಟಾಂಟಾಂ/ಸೂಚನಾ ಫಲಕ/ಕರಪತ್ರ/ಜಾಹೀರಾತು ಫಲಕದ ಮೂಲಕ ಗ್ರಾಮಸಭೆಯ ದಿನಾಂಕವನ್ನು ಗೊತ್ತುಪಡಿಸುವುದು.

1.4.5 ಕ್ರಮ ಸಂಖ್ಯೆ 1.2 ರಂತೆ ತಯಾರಿಸಿದ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಾರ್ವಜನಿಕವಾಗಿ ಗ್ರಾಮಸಭೆಯಲ್ಲಿ ವರ್ಗವಾರು ಓದಿ ಹೇಳುವುದು. ಸದರಿ ಪಟ್ಟಿಯಲ್ಲಿ ಅನರ್ಹರಿರುವುದು ಕಂಡುಬಂದಲ್ಲಿ ಸೂಕ್ತ ಕಾರಣಗಳನ್ನು ನಮೂದಿಸಿ ಸದರಿ ಫಲಾನುಭವಿಗಳನ್ನು ಪಟ್ಟಿಯಿಂದ ಕೈ ಬಿಡುವುದು. ಆದರೆ ಯಾವುದೇ ಕಾರಣಕ್ಕೂ ಹೊಸದಾಗಿ ಫಲಾನುಭವಿಗಳನ್ನು ಸೇರಿಸಲು ಅವಕಾಶವಿರುವುದಿಲ್ಲ.

1.4.6 ಗ್ರಾಮಪಂಚಾಯಿತಿಗಳು ವಸತಿ ಯೋಜನೆಗಳಡಿಯಲ್ಲಿ ಸರ್ಕಾರ ನಿಗದಿಪಡಿಸಿದ ವರ್ಗವಾರು ಗುರಿಗಿಂತ ಅರ್ಹ ವಸತಿರಹಿತರು ಅಧಿಕವಾಗಿದ್ದಲ್ಲಿ ಗುರಿಗೆ ಅನುಗುಣವಾಗಿ ಅರ್ಹ ವಸತಿ ರಹಿತರ ಪಟ್ಟಿಯಿಂದ ಫಲಾನುಭವಿಗಳನ್ನು ಲಾಟರಿ ಎತ್ತುವ ಮೂಲಕ ಗ್ರಾಮಸಭೆಯಲ್ಲಿ ಆಯ್ಕೆ ಮಾಡುವುದು.

1.4.7 ಗ್ರಾಮಪಂಚಾಯಿತಿಯು ಆಯಾ ವರ್ಷಕ್ಕೆ ಸರ್ಕಾರ ನಿಗದಿಪಡಿಸಿದ ಗುರಿಗೆ ಎದುರಾಗಿ ಒಂದು ಅಥವಾ ಕೆಲವು ಗ್ರಾಮಗಳನ್ನೊಳಗೊಂಡಂತೆ ಗುಂಪು ಮನೆ ನಿರ್ಮಿಸಲು ಇಚ್ಛಿಸಿದ್ದಲ್ಲಿ ಗುಂಪು ಮನೆ ಯೋಜನೆಯ ಮಾರ್ಗಸೂಚಿಗಳನ್ವಯ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗುತ್ತದೆ.

1.4.8 ಮೇಲೆ ತಿಳಿಸಿದ ಪದ್ಧತಿಯು ಕೇವಲ ರಾಜ್ಯಸರ್ಕಾರ ಪುರಸ್ಕೃತ ಯೋಜನೆಗಳಿಗೆ ಅನ್ವಯವಾಗುತ್ತದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ(ಗ್ರಾ) ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ನಿಯಮಗಳಂತೆ ಆಯ್ಕೆ ಮಾಡುವುದು.

1.4.9 ಗ್ರಾಮಸಭೆಯಲ್ಲಿ ನಡೆದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ನಿಖರತೆ ಹೊಂದುವ ಸಲುವಾಗಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಕಡ್ಡಾಯವಾಗಿ ವಿಡಿಯೋ ಚಿತ್ರೀಕರಣ ಮಾಡುವುದು ಹಾಗೂ ಈ ವಿಡಿಯೋ ಚಿತ್ರೀಕರಣವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಅಳವಡಿಸುವುದು ಹಾಗೂ ಒಂದು ಪ್ರತಿಯನ್ನು ತಾಲ್ಲೂಕುಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಮಾಹಿತಿಗಾಗಿ ಸಲ್ಲಿಸುವುದು.

1.4.10 ಗ್ರಾಮಸಭೆಯಲ್ಲಿ ಆಯ್ಕೆಯಾದ ಫಲಾನುಭವಿಗಳ ವಿವರಗಳನ್ನು ನಿಗದಿತ ನಮೂನೆ 4ರಲ್ಲಿ ತಯಾರಿಸಿ ಠರಾವು ಹೊರಡಿಸುವುದು.

1.4.11 ಈ ರೀತಿಯಾಗಿ ಆಯ್ಕೆಯಾದ ಫಲಾನುಭವಿಗಳ ವಿವರಗಳನ್ನು ಗ್ರಾಮಪಂಚಾಯಿತಿಯ ಫಲಕದಲ್ಲಿ ಪ್ರಚುರಪಡಿಸುವುದು.

1.4.12 ಅರ್ಹ ವಸತಿ ಮತ್ತು ನಿವೇಶನರಹಿತರ ಪಟ್ಟಿಯನ್ನು ಗ್ರಾಮಸಭೆಯಲ್ಲಿ ಅಂತಿಮಗೊಳಿಸಿದ ನಂತರ ಗ್ರಾಮ ಪಂಚಾಯ್ತಿಯ ಸಾಮಾನ್ಯಸಭೆಯಲ್ಲಿಟ್ಟು ಅನುಮೋದಿಸುವ ಅವಶ್ಯಕತೆ ಇರುವುದಿಲ್ಲ, ಬದಲಾಗಿ ಸದರಿ ಪಟ್ಟಿಯನ್ನು ನೇರವಾಗಿ ತಾಲ್ಲೂಕು ಜಾಗೃತ ಸಮಿತಿಗೆ ಸಲ್ಲಿಸುವುದು.